ದಿನಾಂಕ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**<u>ಪಾಟೀ ಸವಾಲು :</u>** ಪ್ರತಿವಾದಿಗಳ ಪರ ಶ್ರೀ ಸಿ ವಿ ಎನ್ ವಕೀಲರಿಂದ.

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಮ್ಮ ತಂದೆಯ ಹೆಸರು ಏನು ಎಂದರೆ ಸಾಕ್ಷಿ ನನ್ನ ಜೀವಿತ ತಂದೆ ಹೆಸರು ಮೂಗಣ್ಣ ನನ್ನ ಅಜ್ಜಿ ನನ್ನನ್ನು ಸಾಕಿದ್ದರಿಂದ ನನ್ನ ಅಜ್ಜನಾದ ಚನ್ನಪ್ಪ ಹೆಸರನ್ನು ನನ್ನ ಶಾಲಾ ದಾಖಲೆಗಳಲ್ಲಿ ನಮೂದಿಸಲಾಗಿದೆ. ನಿಮ್ಮ ಅಜ್ಜಿ ನಿಮ್ಮನ್ನು ದತ್ತಕ್ಕೆ ಪಡೆದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ತಂದೆ ಮೂಗಣ್ಣ ರವರ ಅಡ್ಡ ಹೆಸರು ಶಾಪೂರಕರ. ನಿಮ್ಮ ಅಡ್ಡ ಹೆಸರು ಶಾಪೂರಕರ ಅಲ್ಲ ಎಂದರೆ ಸರಿಯಲ್ಲ. ಕಲ್ಲವ್ವನವರ ಪೂರ್ಣ ಹೆಸರು ಕಲ್ಲವ್ವ ಚನ್ನಪ್ಪ ಕಾಪೂರಕರ ಎಂದರೆ ಸರಿಯಲ್ಲ, ಸಾಕ್ಷಿ ಶಾಪೂರಕರ ಎನ್ನುತ್ತಾರೆ. ದಾವಾ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ನೀವು ಮತ್ತು ನಿಮ್ಮ ತಾಯಿ ಶಾಲಾ ದಾಖಲೆಗಳನ್ನು ಮತ್ತು ಇತರೆ ದಾಖಲೆಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಮೃತ್ಯು ಪತ್ರವೂ ಕೂಡ ಖೊಟ್ಟಿಯಾಗಿದ್ದರಿಂದ ಕಲ್ಲವ್ವ ನವರು ದಿನಾಂಕ 19-07-1994 ರಂದು ಅದನ್ನು ರದ್ದುಗೊಳಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 19-07-1994 ರಂದು ಕಲ್ಲವ್ವ ನವರು ಪ್ರತಿವಾದಿಗೆ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಹೆಂಡತಿಯ ಹೆಸರು ಮೀರಾ. ನಿಮ್ಮ ಹೆಂಡತಿಯ ಹೆಸರನಲ್ಲಿ ಹಳಿಯಾಳದ ಆಶ್ರಯ ನಗರದಲ್ಲಿ ಮನೆ ಮಂಜೂರಾಗಿದೆ

ಎಂದರೆ ಸರಿ. ಅದರಲ್ಲಿ ಆರ್ ಸಿ ಸಿ ಕಟ್ಟಡ ಕಟ್ಟಿಕೊಂಡಿದ್ದೀರಿ ಎಂದರೆ ಸರಿ. ಸದರಿ ಆರ್ ಸಿ ಸಿ ಕಟ್ಟಡದ ಕೆಲಸ ಇನ್ನು ಬಾಕಿ ಇದ್ದರಿಂದ ಅದರಲ್ಲಿ ಯಾರು ವಾಸವಿಲ್ಲ ಎನ್ನುತ್ತಾರೆ. ನಿಮ್ಮ ಸ್ವಂತ ಮನೆ ಇದ್ದರೂ ಸಹ ದಾವಾ ಆಸ್ತಿಯನ್ನು ಹೊಡೆಯಬೇಕೆಂದು ನನಗೆ ಮನೆ ಇಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆಶ್ರಯ ನಗರದಲ್ಲಿರುವ ಮನೆಯಲ್ಲಿ ವಾಸಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ. ನನಗೆ ವರ್ಷಕ್ಕೆ ಅಂದಾಜು 4 ರಿಂದ 5 ಆದಾಯ ಇದೆ ಎನ್ನುತ್ತಾರೆ. ಬಟ್ಟೆ ವ್ಯಾಪಾರದ ಪರವಾನಿಗೆ ನನ್ನ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ನೀವು ನಿಮ್ಮ ಹೆಂಡತಿ ಮತ್ತು ಮಕ್ಕಳ ದಾಖಲೆಗಳಲ್ಲಿ ನಿಮ್ಮ ಅಡ್ಡ ಹೆಸರು ಕಾಪೂರಕರ ಎಂದು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ 22-08-1990 ರಂದು ಬರೆದ ದಾಖಲೆ ರದ್ದಾಗಿದೆ ಎಂದರೆ ಸಾಕ್ಷಿ ಸುಮ್ಮನೆ ನಿಂತುಕೊಂಡಿರುತ್ತಾರೆ. ನಿಪಿ 25 ನಿಮ್ಮ ತಾಯಿಯ ಚುನಾವಣಾ ಗುರುತಿನ ಚೀಟಿಯಲ್ಲಿ ನಿಮ್ಮ ತಂದೆಯ ಹೆಸರು ಮೂಗಣ್ಣ ಎಂದು ಇದೆ ಎಂದರೆ ಸರಿ. ನಿಮ್ಮ ಚುನಾವಣಾ ಗುರುತಿನ ಚೀಟಿಯಲ್ಲಿ ನಿಮ್ಮ ಅಡ್ಡಹೆಸರು ಶಾಪೂರಕರ ಇದೆ ಎಂದರೆ ಸರಿ. ನಿಮ್ಮ ಅಡ್ಡಹೆಸರು ಶಾಪೂರಕರ ಅಲ್ಲ ಕಾಪೂರಕರ ಎಂದರೆ ಸಾಕ್ಷಿ ಕೆಲವೊಂದು ದಾಖಲೆಗಳಲ್ಲಿ ಶಾಪೂರಕರ ಎಂದು ಇದೆ, ಕೆಲವೊಂದು ದಾಖಲೆಗಳಲ್ಲಿ ಕಾಪೂರಕರ ಎಂದು ಇದೆ ಅವೆರಡೂ ಅಡ್ಡ ಹೆಸರು ನನ್ನವೆ ಎನ್ನುತ್ತಾರೆ. ನಿಪಿ 31 ಅನ್ನು ಯಾವುದೇ ದಾಖಲೆಗಳನ್ನು ನೋಡದೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ನನ್ನ ಹಳೆಯ ಪಡಿತರ ಚೀಟಿಯ ಆಧಾರದ ಮೇಲೆ ಕೊಟ್ಟಿದ್ದಾರೆ ಎನ್ನುತ್ತಾರೆ. ನಿಪಿ 31 ರಲ್ಲಿ ನನ್ನ ಹಳೆಯ ಪಡಿತರ ಚೀಟಿಯ ಆಧಾರದ ಮೇಲೆ ಕೊಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಪಡಿತರ ಚೀಟಿಯನ್ನು ನೋಡಿ ಪಂಚನಾಮೆ ಮಾಡಿ ನಿಪಿ 31

ಅನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ಕಲ್ಲವ್ವನವರು ನಿಮ್ಮ ಕುಟುಂಬದ ಸದಸ್ಯರು ಅಲ್ಲ ನಿಮ್ಮ ಜೊತೆ ವಾಸವಿಲ್ಲ ಕಂದಾಯ ಇಲಾಖೆಯ ಜೊತೆ ಮಿಲಾಪಿಯಾಗಿ ನಿಪಿ 31 ಅನ್ನು ಸುಳ್ಳು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ನಮ್ಮ ಜೊತೆ ವಾಸವಿದ್ದರು ಎನ್ನುತ್ತಾರೆ. ನಿಮ್ಮ ಆಧಾರ ಕಾರ್ಡ ನಲ್ಲಿ ಮತ್ತು ಪಡಿತರ ಚೀಟಿಯಲ್ಲಿ ಅಡ್ಡ ಹೆಸರು ಶಾಪೂರಕರ ಇದೆ ಎಂದರೆ ಸರಿ. ನೀವು ಕಾಪೂರಕರ ಅಲ್ಲ ಶಾಪೂರಕರ ಎಂದರೆ ಸರಿ, ನನ್ನ ಅಡ್ಡ ಹೆಸರು ಶಾಪೂರಕರ ಕೆಲವೊಂದು ದಾಖಲೆಗಳಲ್ಲಿ ಕಾಪೂರಕರ ಎಂದು ಆಗಿದೆ ಎನ್ನುತ್ತಾರೆ. ನಿಮಗೆ ಸ್ವಂತ ಮನೆ ಇದ್ದು ಸಾಕಷ್ಟು ಆದಾಯವಿದ್ದರೂ ಸಹ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮೋಸ ಮಾಡಿ ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.